ಮಾತಲ್ಲ' ಅಂತ ಮತ್ತೊಂದು ಕಡ್ಡಿ ತುಂಡರಿಸಿದ.

"ಎಗ್‌ಝ್ಯಾಕ್ಟ್‌ಲಿ... ನನ್ನ ಕಥಾನಾಯಕ ಆ ವಿಜ್ಞಾನಿಗೆ ಹೇಳಿದ್ದು ಇದನ್ನೇ, ಲಖನ್ ಹೇಳಿದ್ದನ್ನೇ. ಆಗ ಆ ವಿಜ್ಞಾನಿ ಉತ್ತರಿಸುತ್ತಾನೆ – 'ಓ ಹಾಗಾದರೆ ಜೀವಕ್ಕೇನೂ ಅಪಾಯ ಆಗದೆ ಹಾಗೆ ನಾನು ಮಾಡಿ ತೋರಿಸಿದರೆ?'

'ಮಾಡಿ ತೋರಿಸು.'

'ಚಾಲೆಂಜ್?'

ವಿಜ್ಞಾನಿ ನಗುತ್ತಲೇ ಈ ಚಾಲೆಂಜನ್ನು ಸ್ವೀಕರಿಸುತ್ತಾನೆ.

ಎಂತಹ ಜವಾಬ್ದಾರಿ ಕೆಲಸವಿದು ಅಂದಾಜನ್ನಾದರೂ ಮಾಡಿಕೊಳ್ಳಿ. ಕಂಪ್ಯೂಟರ್‌ಗೆ ಏನೇನೆಲ್ಲಾ ಡಾಟಾಗಳನ್ನು ಯಾವ ಬೈನರಿ ಡಿಜಿಟ್‌ಗಳತನಕ ತುಂಬಬೇಕು ನೋಡಿ. ಮನುಷ್ಯನ ಅವಯವಗಳನ್ನು ಇಲ್ಲಿ ಬಿಚ್ಚಿ ತರಂಗಗಳ ಮೂಲಕ ಕಳಿಸಿ ನಿರ್ದಿಷ್ಟ ಜಾಗದಲ್ಲಿ ಮತ್ತೆ ಸಂಯೋಜಿಸುವ ಏರ್ಪಾಡು ಆಗಬೇಕು. ಮಾಡಿ ತೋರಿಸಿಯೇ ತೋರಿಸುತ್ತೇನೆ. ಅಂಥದೊಂದು ಉಪಕರಣ ಮಾಡಿತೋರಿಸುತ್ತೇನೆ. ಆದರೆ ಒಂದಷ್ಟು ಸಮಯ ಬೇಕು ಅಷ್ಟೆ." ಎಂದು ಹೇಳಿ ದೀರ್ಘ ಉಸಿರುಬಿಟ್ಟ ಅಮಿತ್.

ನಾವೀಗ ಮೂವರೂ ಅವನ ಕಥೆಯಲ್ಲೇ ಮುಳುಗಿಬಿಟ್ಟಿದ್ದೆವು. 'ಮಿತ್ರರೇ ಹೇಗಿದೆ ಕಥೆ? ರೋಚಕವಾಗಿದೆಯೋ ಅಥವಾ ಸುಮ್ಮನೆ ಏನೇನೋ ಬಡಾಯಿ ಕೊಚ್ಚಿಕೊಂಡ ಅಂತ ಅನ್ನುತ್ತೀರೋ?' ಅಂತ ಮೂವರ ಮೇಲೂ ದೃಷ್ಟಿ ಹರಿಸಿದ.

'ಬಡಾಯಿ ಅಂತೇನೂ ಅಲ್ಲ, ಕಥೆ ಅದ್ಭುತವಾಗಿಯೇ ಇದೆ' ಎಂದು ಎಲ್ಲರೂ ಒಮ್ಮತದಿಂದ ಹೇಳಿದೆವು. ಲಖನ್ ಸುಮ್ಮನಿದ್ದಾನೆಯೇ? 'ಅದಾಯ್ತು, ಈ ಕಥೆಯ ಕೊನೆಯ ದೃಶ್ಯ ಏನು?' ಪ್ರಶ್ನೆ ಹಾಕಿಯೇಬಿಟ್ಟ.

'ಅಂದರೆ ಈ ಕಥೆ ಇನ್ನೂ ಸಾಗುವುದಿದೆ ಅಂತ ಅನ್ನುತ್ತೀರಾ?' ಅಮಿತ್ ಮರುಪ್ರಶ್ನೆ ಇಟ್ಟ. ದಿಲೀಪ್ ಹೇಳಿದ 'ಹೌದು. ರೋಚಕವಾಗಿ ಬೆಳೆದ ಕಥೆ ರೋಚಕವಾಗಿಯೇ ಮುಗಿಯಬೇಕಲ್ಲ? ರೋಚಕವಾದ ಅಂತಿಮ ದೃಶ್ಯವೊಂದು ಬೇಕಲ್ಲ?'

ಈ ಬಗ್ಗೆ ಅಮಿತ್ ಈಗಾಗಲೇ ಯೋಚಿಸಿರಬಹುದಲ್ಲ? ಎಲ್ಲಿ ಆರಂಭವಾಗಿ, ಹೇಗ್ಹೇಗೆ ಬೆಳವಣಿಗೆ ಹೊಂದಿ ಎಲ್ಲಿ ಹೇಗೆ ಮುಗಿಸಬೇಕೆಂಬುದನ್ನು ಪರಿಣತ ಅಮಿತ್ ಯೋಚಿಸದಿರಲಿಕ್ಕೆ ಹೇಗೆ ಸಾಧ್ಯ? 'ಮಿತ್ರರೇ ಈ ಕಥೆಯನ್ನು ಹೇಗೆ ರೋಚಕವಾಗಿ ಕೊನೆಗೊಳಿಸಬಹುದು ಎಂಬುದರ ಕುರಿತು ನೀವೂ ಯೋಚಿಸಿ. ನಾನು ಸ್ವಲ್ಪ ಬಾತ್‌ರೂಮಿಗೆ ಹೋಗಿ ಬರ್ತೇನೆ' ಎನ್ನುತ್ತ ಬ್ಯಾಗ್ ಹಿಡಿದೆದ್ದ. 'ಎಲ್ಲಾ ವ್ಯವಸ್ಥೆ ಇದೆ. ಉತ್ಕೃಷ್ಟವಾದವುಗಳನ್ನೇ ತರಿಸಿ ಇಟ್ಟಿದ್ದೇನೆ' ಅಂದೆ ಮೆಲ್ಲಗೆ. ಬಹುಶಃ ಕೇಳಿಸಿರಲಿಕ್ಕಿಲ್ಲ, ಅಥವಾ ಅವನೂ ಬೇರೆ ಯಾವುದೋ ವಿಚಾರದಲ್ಲಿ ತಲ್ಲೀನ ಆದರೂ ಆಗಿರಬಹುದು.

ದಿಲೀಪ್ ಚೇಷ್ಟೆ ಮಾಡಿದ 'ಈ ಮಲ್ಟಿನ್ಯಾಶನಲ್ ಅಮೆರಿಕಾ ಕಂಪನಿಗಳು ಉತ್ಕೃಷ್ಟಕ್ಕಿಂತಲೂ ಮೇಲ್ದರ್ಜೆಯ ಬಾತ್‌ರೂಂ ಐಟಮ್ಮುಗಳನ್ನು ಈಗ ತಯಾರಿಸಿರಬಹುದು! ಸ್ಪರ್ಧಾತ್ಮಕ ಯುಗ!' 'ವಿಷಯಾಂತರ ಬೇಡ, ಆತ ಬರುವವರೆಗೆ ಅವನ ಕಥೆಯ ಅಂತ್ಯದ ಬಗ್ಗೆ ಯೋಚಿಸೋಣ' ಎನ್ನುತ್ತ ಗ್ಲಾಸ್ ಎತ್ತಿದ.

ಹಾಗಲ್ಲ ಹೀಗೆ, ಹೀಗಲ್ಲ ಹಾಗೆ ಅಂತ ಏನೇನೋ ಸಂಭಾವ್ಯತೆಗಳನ್ನು ಎಳೆದು ತಂದು ಸಾಧ್ಯತೆಗಳ ಕುರಿತು ಚರ್ಚಿಸುತ್ತಿದ್ದಾಗ ಸಮಯ ಸರಿದದ್ದೇ ಗೊತ್ತಾಗಲಿಲ್ಲ. 'ಅರ್ಧ ತಾಸಾಯಿತು ಆತ ಹೋಗಿ. ಇನ್ನೂ ಬರಲಿಲ್ಲ ಅಂದರೆ?... ಅಕಸ್ಮಾತ್ ಏನಾದರೂ ಹೆಚ್ಚು ಕಡಿಮೆ ಆಗಿ... 'ಅಂತ ದಿಲೀಪ್ ಅನ್ನುವಾಗಲೇ ನನಗೂ ಹಾಗೇ ಸಂಶಯ ಬಂದು ಬಾತ್‌ರೂಮಿನ ಸಮೀಪ ಹೋಗಿ